Mangalore
School-books
Canarese Series
1. Canarese Primer
2. ed. 1858

ಬಾಲಶಿಕ್ಷೆ.

ಮೊದಲನೇ ಭಾಗ.

ಅಕ್ಷರಮಾಲೆ.

ಯೆರಡನೆ ಛಾಪೆ.

MANGALORE SCHOOL-BOOKS.

CANARESE SERIES.

I. CANARESE PRIMER.

SECOND EDITION.

ಮಂಗಳೂರು:
ಜರ್ಮನ್ ಮಿಶನ್ ಪ್ರೆಸ್.
೧೮೫೮.

ಕ್ರಯ ೧ ಅಣೆ. Price 1 Anna.

1

2

ಅ

೧. ಅ ಕ ಖ	ಕ	ಅ	ಖ	ಅ	ಖ	ಕ
	ಖ	ಕ	ಅ	ಕ	ಅ	ಖ
	ಅ	ಖ	ಕ	ಖ	ಕ	ಅ
೨. ಗ ಘ ಙ	ಘ	ಗ	ಙ	ಗ	ಙ	ಘ
	ಖ	ಘ	ಗ	ಕ	ಅ	ಙ
	ಗ	ಙ	ಘ	ಙ	ಘ	ಗ
೩. ಚ ಛ ಜ ಝ ಞ	ಜ	ಞ	ಝ	ಛ	ಚ	ಞ
	ಝ	ಕ	ಚ	ಘ	ಛ	ಜ
	ಅ	ಛ	ಖ	ಜ	ಙ	ಞ
	ಛ	ಘ	ಞ	ಚ	ಖ	ಝ
	ಗ	ಚ	ಕ	ಝ	ಜ	ಗಜ
೪. ಟ ಠ ಡ ಢ ಣ	ಡ	ಣ	ಟ	ಢ	ಠ	ಟ
	ಢ	ಘ	ಠ	ಝ	ಟ	ಚ
	ಠ	ಅ	ಡ	ಙ	ಣ	ಞ
	ಟ	ಠ	ಛ	ಢ	ಡ	ಟ
	ಕಡ	ಕಣ	ಜಡ	ಕಡಗ	ಕಣಜ	

೫. ತಥದಧನ

ಥ ಧ ದ ತ ನ ಥ ದ
ಟ ದ ಡ ಢ ಫ ಘ ಠ
ನ ಣ ಥ ತ ಕ ಝ ದ
ತ ಟ ನ ಧ ಘನ ದನ ಧಡ
ಜನ ಧನ ತಡ ತನಕ ಗಗನ ಜತನ

೬. ಪಫಬಭಮ

ಬ ಫ ಭ ಪ ಛ ಫ ಘ
ಮ ಪ ಬ ಚ ಟ ಖ ಭ
ಬ ಜ ಫ ಣ ಭ ಮ ಪ
ಮ ಮಗ ಮಠ ಮತ ಪಠ ಪದ
ಮದ ಗಮನ ಮದಗ ಕಪಟ ಅಧಮ

೭. ಯರಲವ

ರ ಠ ಯ ಝ ಛ ವ ಮ
ಲ ಅ ಅರ ದಯ ರಥ ಭಯ
ಜಯ ಫಲ ಮರ ಲಯ ಬಲ ಕಮಲ
ನರಕ ಚರಣ ಮರಣ ವಚನ ಯರಕ

೮. ಶಷಸಹಳ

ಸ ನ ಷ ಫ ಘ ಶ ತ
ಳ ಹ ಪ ವ ಮ ಷ ವಶ
ಹಣ ರಸ ಗಳ ವನ ಧರ ಲವಣ
ತಗರ ಅಗಸ ಬಹಳ ಹವಳ ಝಗಳ
ಹದಗ ಬರಹ ಸಮಯ ಅವಸರ ಕರಗಸ

ಆ

೯.	ಅ	ಆ	ಕಾ ಖ ಆ ಕ ಅ ಖಾ
	ಕ	ಕಾ	ಖಾಸ ಆಟ ಅಕಾರ ಕಕಾರ ಖಕಾರ
	ಖ	ಖಾ	ಕಾಗದ ಆಕಾಶ ಸರಕಾರ ಆಖರಿ
೧೦.	ಗ	ಗಾ	ಘಾ ಗ ಙ ಗಾ ಘ ಙಾ
	ಘ	ಘಾ	ಗಾಣ ಘಾಯ ಗಕಾರ ಘಕಾರ ಙಕಾರ
	ಙ	ಙಾ	ಗಾಯನ ಆಗಾಗ. ಮರಣದ ಘಾಯ.
೧೧.	ಚ	ಚಾ	ಞಾ ಚ ಜಾ ಝ ಚಾ ಛ
	ಛ	ಛಾ	ಜಾ ಜಾ ಝಾ ಛಾ ಜ ಞ
	ಜ	ಜಾ	ವಜಾ ಜಾಡ ಚಕಾರ ಛಕಾರ ಜಕಾರ
	ಝ	ಝಾ	ಝಕಾರ ಞಕಾರ. ಚಾಮರದ ಆಚಾರ.
	ಞ	ಞಾ	ಚಾಕರನ ಜಾಗರ. ಸರಕಾರದ ಹಣ.
೧೨.	ಟ	ಟಾ	ಠಾ ಢ ಣಾ ಡ ಢಾ ಡಾ
	ಠ	ಠಾ	ಟಾ ಚಾ ಟ ಜಾ ಞಾ ಣಾ
	ಡ	ಡಾ	ಠಾಣಾ ಕಾಲ ಟಕಾರ ಠಕಾರ ಡಕಾರ
	ಢ	ಢಾ	ಢಕಾರ ಣಕಾರ ಅಕಟಾ. ಮಟಾರದ ಜನ.
	ಣ	ಣಾ	ಗಾಯಕರ ಗಾಯನ. ಮಠದ ಆಚಾರ.

೧೩.	ತ	ತಾ	ದ ಡಾ ದಾ ಧ ಥಾ ಧಾ
	ಥ	ಥಾ	ತಾ ಕಾ ನ ಥ ನಾ ತ
	ದ	ದಾ	ದಾಸ ನಾಗ ದಾರ ತಾರ ದಾನ ತಾತ
	ಧ	ಧಾ	ತಕಾರ ಥಕಾರ ದಕಾರ ಧಕಾರ ನಕಾರ
	ನ	ನಾ	ಆಧಾರ ತಾಮಸ ನಾಗರ. ಕಾಗದ ತಾ.
೧೪.	ಪ	ಪಾ	ಬಾ ಪ ಭಾ ಭಾ ಬ ಭ
	ಫ	ಫಾ	ಫಾ ಪಾ ಮ ಫ ಛಾ ಮಾ
	ಬ	ಬಾ	ಮಾವ ಪಾಠ ಭಾವ ಪಕಾರ ಫಕಾರ
	ಭ	ಭಾ	ಬಕಾರ ಭಕಾರ ಮಕಾರ ಪಾಪಭಾರ
	ಮ	ಮಾ	ಪಾದರಸ. ಯಜಮಾನನ ಸಮಾಚಾರ.
೧೫.	ಯ	ಯಾ	ರ ಠಾ ರಾ ಯ ಝಾ ಯಾ
	ರ	ರಾ	ವಾ ಲ ವ ಲಾ ನಾ ವಾ
	ಲ	ಲಾ	ವಾಸ ಯಾತ ವಾರ ಯಾವ ರಾಗ ಲಾಭ
	ವ	ವಾ	ಲಾಯ ಯಕಾರ ರಕಾರ ಲಕಾರ ವಕಾರ
೧೬.	ಶ	ಶಾ	ಷ ಘಾ ಷಾ ಮಾ ಹಾ ಳಾ
	ಷ	ಷಾ	ನಾ ಸಾ ಸ ಶಾ ತಾ ಶ
	ಸ	ಸಾ	ಶಾಪ ಶಕಾರ ಷಕಾರ ಸಕಾರ ಹಕಾರ
	ಹ	ಹಾ	ಳಕಾರ ಆಯಾಸ ಸಾಗರ ಹಾಳಾದ
	ಳ	ಳಾ	ಸಾಧಕ ಕಷಾಯ ಸಾಧನ ಆಹಾರ

ಇ ಈ

೧೭.	ಅ	ಇ	ಈ	ಕಿ ಇ ಖಿ ಈ ಖೀ ಕೀ
	ಕ	ಕಿ	ಕೀ	ಈಗ ಆಗ ಇವು ಇವನ ಕಿರಣ
	ಖ	ಖಿ	ಖೀ	ಈತನ ಆತನ. ಈಚಲ ಮರ.
೧೮.	ಗ	ಗಿ	ಗೀ	ಘಿ ಙಿ ಗಿ ಙೀ ಗೀ ಘೀ
	ಘ	ಘಿ	ಘೀ	ಗಿಡ ಗೀತ ರಾಗಿ ಆಗಿ ಗೀಜಗ
	ಙ	ಙಿ	ಙೀ	ಈಗಿನ ಆಗಿನ. ಆಲದ ಗಿಡ.
೧೯.	ಚ	ಚಿ	ಚೀ	ಜಿ ಚೀ ಞೀ ಝಿ ಛೀ ಚಿ
	ಛ	ಛಿ	ಛೀ	ಝೀ ಛಿ ಜೀ ಜೀ ಞಿ ಛೀ
	ಜ	ಜಿ	ಜೀ	ಚೀಲ ಜೀವ ಜೀನ ಖಚಿತ.
	ಝ	ಝಿ	ಝೀ	ಈಗಿನ ಜೀವ, ಆಗಿನ ಜೀವ.
	ಞ	ಞಿ	ಞೀ	ಈಗ ಇವರ ವಚನ ಖಚಿತ.
೨೦.	ಟ	ಟಿ	ಟೀ	ಠಿ ಣೀ ಟಿ ಢಿ ಡಿ ಠೀ
	ಠ	ಠಿ	ಠೀ	ಟೀ ಢೀ ಣಿ ಡೀ ರಾಣಿ ಕಿಡಿ
	ಡ	ಡಿ	ಡೀ	ಗಣಿ ಗಾಡಿ ಚೀಟಿ ನಾಡಿ ಕಾಣಿ
	ಢ	ಢಿ	ಢೀ	ಚಾಡಿ ಈಟಿ ಲಾಡಿ ತಗಣಿ ಕರಡಿ
	ಣ	ಣಿ	ಣೀ	ಸರಪಣಿ. ಮಾಗಣಿಯ ಚಾವಡಿ

೨೧.	ತ	ತಿ	ತೀ	ನೀ ದಿ ತಿ ಥೀ ಧೀ ಧೀ
	ಥ	ಥಿ	ಥೀ	ಥಿ ಧಿ ದೀ ನಿ ತೀ ತೀ
	ದ	ದಿ	ದೀ	ತಿಥಿ ನೀಲ ತೀರ ದಿನ ಜಾತಿ
	ಧ	ಧಿ	ಧೀ	ನೀತಿ ತಿದಿ ದಿವಸ ನಾದಿನಿ
	ನ	ನಿ	ನೀ	ಸಮಾಧಿ ಅಧಿಕಾರ ಶನಿವಾರ
೨೨.	ಪ	ಪಿ	ಪೀ	ಪಿ ಮೀ ಬಿ ಫೀ ಭೀ ಭೀ
	ಫ	ಫಿ	ಫೀ	ಬೀ ಬೀ ಫಿ ಪೀ ಭಿ ಮಿ
	ಬ	ಬಿ	ಬೀ	ಬೀಜ ಮಿತಿ ಬೀದಿ ಭೀತಿ ಪೀಠ
	ಭ	ಭಿ	ಭೀ	ಕಪಿ ಅಫೀನಿ ನಿಮಿಷ ಸಮೀಪ
	ಮ	ಮಿ	ಮೀ	ಗಜಿಬಿಜಿ. ಪಿಶಾಚನ ಅಭಿಮಾನ.
೨೩.	ಯ	ಯಿ	ಯೀ	ಠಿ ರಿ ಲೀ ಪೀ ಯಿ ಝಿ
	ರ	ರಿ	ರೀ	ವಿ ನಿ ಯೀ ಲಿ ಅ ರೀ
	ಲ	ಲಿ	ಲೀ	ಕಿವಿ ಇಲಿ ರೀತಿ ನಾಯಿ ಗಲಿಬಿಲಿ
	ವ	ವಿ	ವೀ	ಶರೀರ ವಿಲಾಯತಿ. ರಾಣೀ ಕಿರೀಟ.
೨೪.	ಶ	ಶಿ	ಶೀ	ಷೀ ಳಿ ಶೀ ಸೀ ಹಿ ಶಿ
	ಷ	ಷಿ	ಷೀ	ಫಿ ಷಿ ನಿ ಸಿ ಳೀ ಹೀ
	ಸ	ಸಿ	ಸೀ	ಸಸಿ ರಾಶಿ ಗಿಳಿ ಮಶಿ ಮಹಿಷಿ
	ಹ	ಹಿ	ಹೀ	ಸೀಸ ಶಿಖರ ಅರಸಿನ ಹಿಮಕಾಲ
	ಳ	ಳಿ	ಳೀ	ಛಳಿ ಘಾಳಿಪಟ ಅಪರಿಮಿತವಾಗಿ

ಉ ಊ

೨೫.	ಅ	ಉ	ಊ	ಖು ಉ ಕು ಊ ಕೂ
	ಕ	ಕು	ಕೂ	ಖೂ ಕುರಿ ಖುರ ಸಾಕು ಊಟ
	ಖ	ಖು	ಖೂ	ಕೂಲಿ ಉಪಕಾರ ಉಪವಾಸ
೨೬.	ಗ	ಗು	ಗೂ	ಙು ಗೂ ಘು ಗು ಘೂ
	ಘ	ಘು	ಘೂ	ಕೂ ಙೂ ಗುಣ ಘೂಕ ಡಾಕು
	ಙ	ಙು	ಙೂ	ಛಳಕು. ಕೂಲಿಯವರ ಕೂಲಿ.
೨೭.	ಚ	ಚು	ಚೂ	ಜು ಞೂ ಚು ಝೂ ಛು
	ಛ	ಛು	ಛೂ	ಚೂ ಛೂ ಝು ಜೂ ಞು
	ಜ	ಜು	ಜೂ	ಜೂಜು ಚೂರಿ. ಡಾಕಪಾಕು.
	ಝ	ಝು	ಝೂ	ಊರ ಬೀದಿ. ಚೂರೀ ಬಾಯಿ.
	ಞ	ಞು	ಞೂ	ಘೂಕದ ಕೂಗು. ಕುರೀ ಕಿವಿ.
೨೮.	ಟ	ಟು	ಟೂ	ಢು ಡೂ ಟು ಣು ಠೂ
	ಠ	ಠು	ಠೂ	ಟೂ ಢೂ ಡು ಠು ಣೂ
	ಡ	ಡು	ಡೂ	ಞಾಡು ನೀಡು ಗುಡುಗು
	ಢ	ಢು	ಢೂ	ಕೂಡುವ ಉಡುವ ಆಡುವಾ.
	ಣ	ಣು	ಣೂ	ಊಟ ಮಾಡುವಾ. ಮಾತಾಡು

೨೯.	ತ	ತು	ತೂ	ನು ದೂ ತೂ ಧು ಥೂ
	ಥ	ಥು	ಥೂ	ದು ನೂ ಧೂ ಥು ತು
	ದ	ದು	ದೂ	ಮಾತು ನುಡಿ ತೂಕ ಆತನು
	ಧ	ಧು	ಧೂ	ತೂತು ಧೂಪ ತೂಗ ಬದುಕು.
	ನ	ನು	ನೂ	ಯಜಮಾನನ ಕೂಲಿಯವನು.
೩೦.	ಪ	ಪು	ಪೂ	ಮು ಪೂ ಬೂ ಫು ಭು
	ಫ	ಫು	ಫೂ	ಭೂ ಮೂ ಫೂ ಪು ಬು
	ಬ	ಬು	ಬೂ	ಮುಖ ಮೂಗು ಚಬುಕು
	ಭ	ಭು	ಭೂ	ಭುಜ ಬೂದಿ ಮುದುಕನು
	ಮ	ಮು	ಮೂ	ಪುಡಿ ಸಮೂಹ ಬುಧವಾರ
೩೧.	ಯ	ಯು	ಯೂ	ಲು ರೂ ವು ಯೂ ವೂ
	ರ	ರು	ರೂ	ಯು ಲೂ ರು ಊರು ಯುಗ
	ಲ	ಲು	ಲೂ	ಕಾಲು ನೀರು ಕೀಲು ಉಗುರು
	ವ	ವು	ವೂ	ಬರವು. ಹಗಲಿನ ಬಿಸಿಲು.
೩೨.	ಶ	ಶು	ಶೂ	ಹು ಷೂ ಳೂ ಶು ಸೂ
	ಷ	ಷು	ಷೂ	ಳು ಶೂ ಸು ಷು ಹೂ
	ಸ	ಸು	ಸೂ	ಶಿಶು ಕೂಸು ಹೂವು ಇರುಳು
	ಹ	ಹು	ಹೂ	ಸುಖ ಹುಳಿ ಹುಲಿ ಹಸುರು
	ಳ	ಳು	ಳೂ	ಹುರುಳಿ ಸುಲಭವಾಗುವದು

ಎ ಏ ಐ

೩೩.	ಅ ಎ ಏ ಐ ಕ ಕೆ ಕೇ ಕೈ ಖ ಖೆ ಖೇ ಖೈ	ಖೆ ಎ ಕೆ ಖೇ ಕೇ ಐ ಕೈ ಖೈ ಏ ಕೇರಿ ಐದು ಏಳು ಕೆಲಸ ಎಲುವು. ಕೆಸರಿನ ಕೈ.
೩೪	ಗ ಗೆ ಗೇ ಗೈ ಘ ಘೆ ಘೇ ಘೈ ಙ ಙೆ ಙೇ ಙೈ	ಘೈ ಗೇ ಙೆ ಗೆ ಙೈ ಘೇ ಙೇ ಘೆ ಗೈ ಕಾಗೆ ಹಗೆ ಹಾಗೆ ಹೊಗೆ ಗೇಣು ನಾಲಿಗೆ ಹಳಿಗೆ
೩೫.	ಚ ಚೆ ಚೇ ಚೈ ಛ ಛೆ ಛೇ ಛೈ ಜ ಜೆ ಜೇ ಜೈ ಝ ಝೆ ಝೇ ಝೈ ಞ ಞೆ ಞೇ ಞೈ	ಝೆ ಚೇ ಞೈ ಛೆ ಜೈ ಝೇ ಚೆ ಛೆ ಚೈ ಜೇ ಛೆ ಜೆ ಞೆ ಝೈ ಞೇ ಜೇರಿ ಛೇದ ಚೆಲುವು ಜೆಗಲಿ ಜೈಮಿನಿ ಐದು ಕಾಗೆ, ಎರಡು ಗಿಣಿ.
೩೬.	ಟ ಟೆ ಟೇ ಟೈ ಠ ಠೆ ಠೇ ಠೈ ಡ ಡೆ ಡೇ ಡೈ ಢ ಢೆ ಢೇ ಢೈ ಣ ಣೆ ಣೇ ಣೈ	ಟೆ ಣೈ ಡೈ ಟೇ ಢೆ ಡೆ ಣೇ ಠೇ ಣೆ ಡೇ ಠೈ ಡೇ ಟೈ ಢೈ ಠೆ ಜಡೆ ಠಾಣೆ ಆಣೆ ಹೇಡೆ ಠೇವಣೆ ಧರಣೆ. ಐದು ಆಣೆ, ಎರಡು ಕಾಸು.

೩೭. ತ ತೆ ತೇ ತೈ	ಧೈ ಥೇ ನೆ ದೆ ತೇ ನೈ
ಥ ಥೆ ಥೇ ಥೈ	ಥೆ ತೈ ದೈ ನೇ ಥೈ ಧೇ
ದ ದೆ ದೇ ದೈ	ತೆ ದೇ ಧೆ ದೇಹ ಎದೆ ಆನೆ
ಧ ಧೆ ಧೇ ಧೈ	ಕಥೆ ದೇಶ. ದೇವರ ಆರಾಧನೆ.
ನ ನೆ ನೇ ನೈ	ಅರಮನೆ. ತೇಲಾಡುವ ನೀರು.
೩೮. ಪ ಪೆ ಪೇ ಪೈ	ಪೆ ಬೇ ಮೇ ಫೈ ಭೈ ಪೇ
ಫ ಫೆ ಫೇ ಫೈ	ಭೆ ಪೈ ಬೈ ಮೈ ಬೆ ಫೆ
ಬ ಬೆ ಬೇ ಬೈ	ಮೆ ಫೇ ಭೇ ಬಾಪೆ ಬೇಲಿ
ಭ ಭೆ ಭೇ ಭೈ	ಶೀಮೆ ಮೇಣ ಪೇಟೆ ಬೈಲು
ಮ ಮೆ ಮೇ ಮೈ	ಪೈರು. ಮೇಘಗಳಸಮೂಹ.
೩೯. ಯ ಯೆ ಯೇ ಯೈ	ರೈ ವೆ ಲೈ ಯೇ ಲೆ ರೆ
ರ ರೆ ರೇ ರೈ	ವೈ ರೇ ಯೆ ಲೇ ಯೈ ವೇ
ಲ ಲೆ ಲೇ ಲೈ	ಎಲೆ ಶೀರೆ ಯೇನು ಲೇಖಣಿ
ವ ವೆ ವೇ ವೈ	ಗೆರೆ ಮೇಲೆ ಸಾಸಿವೆ ವೈರಿಗಳು
೪೦. ಶ ಶೆ ಶೇ ಶೈ	ಸೇ ಳೈ ಸೆ ಳೇ ಷೆ ಹೇ
ಷ ಷೆ ಷೇ ಷೈ	ಳೆ ಹೈ ಷೇ ಶೇ ಹೆ ಶೆ
ಸ ಸೆ ಸೇ ಸೈ	ಷೈ ಸೈ ಶೈ ಭಾಷೆ ಮಳೆ
ಹ ಹೆ ಹೇ ಹೈ	ಸೇವೆ ಹೆಗಲು ಹೆಸರು ಮೀಶೆ
ಳ ಳೆ ಳೇ ಳೈ	ಪರದೇಶಿಯರು ಜೇಡಹುಳ

ಒ ಓ ಔ

೪೧.	ಅ	ಒ	ಓ	ಔ	ಖೊ ಔ ಕೋ ಖೋ ಒ ಕೊ
	ಕ	ಕೊ	ಕೋ	ಕೌ	ಖೌ ಓ ಕೌ ಕೋಣೆ ಕಾಡೆ
	ಖ	ಖೊ	ಖೋ	ಖೌ	ಔಷಧ ಔತಣ. ಓ ಕೇಳಿರಿ.
೪೨.	ಗ	ಗೊ	ಗೋ	ಗೌ	ಘೊ ಜೋ ಗೌ ಜೌ ಗೊ
	ಘ	ಘೊ	ಘೋ	ಘೌ	ಜೊ ಗೋ ಘೌ ಘೋಷ.
	ಙ	ಙೊ	ಙೋ	ಙೌ	ಬಾಳೇ ಗೊನೆ ಕಾಯಿದು ತೊ.
೪೩.	ಚ	ಚೊ	ಚೋ	ಚೌ	ಝೊ ಞೌ ಛೋ ಝೋ
	ಛ	ಛೊ	ಛೋ	ಛೌ	ಝೌ ಜೋ ಚೊ ಛೌ ಚೌ
	ಜ	ಜೊ	ಜೋ	ಜೌ	ಞೊ ಛೊ ಜೌ ಜೋಳ
	ಝ	ಝೊ	ಝೋ	ಝೌ	ಚೌಕ ಜೌಳಿ ಜೊಡರು.
	ಞ	ಞೊ	ಞೋ	ಞೌ	ಅವನು ಝೋಪಡಿ ತರಲಿ.
೪೪.	ಟ	ಟೊ	ಟೋ	ಟೌ	ಡೊ ಣೋ ಟೋ ಣೊ ಠೊ
	ಠ	ಠೊ	ಠೋ	ಠೌ	ಠೋ ಢೋ ಠೌ ಢೊ ಡೌ ಣೌ
	ಡ	ಡೊ	ಡೋ	ಡೌ	ಟೌ ಡೋ ಟೊ ಟೋಪಿ
	ಢ	ಢೊ	ಢೋ	ಢೌ	ನಿಮಗೆ ಡೋಲಿ ಬೇಕೋ?
	ಣ	ಣೊ	ಣೋ	ಣೌ	ಬೇಡ. ಟೋಪಿ ಸಾಕು.

೪೫.	ತ ತಾ ತೋ ತೌ	ಥೋ ದೌ ನಾ ತೋ ಥೌ
	ಥ ಥಾ ಥೋ ಥೌ	ನೋ ತೌ ದಾ ಥೋ ನೌ ಥಾ
	ದ ದಾ ದೋ ದೌ	ದೋ ಧೌ ತಾ ತಾಡೆ ನೋ
	ಧ ಧಾ ಧೋ ಧೌ	ದೌತಿ ಧಾರೆ ನೋಟ ತೋಟ
	ನ ನಾ ನೋ ನೌ	ತಾಗಲು ತಾಗರಿ. ನೋಡಿರಿ.
೪೬.	ಪ ಪಾ ಪೋ ಪೌ	ಫಾ ಭೌ ಫೋ ಮೌ ಭಾ
	ಫ ಫಾ ಫೋ ಫೌ	ಭೋ ಫೌ ಬೌ ಮೋ ಪೋ
	ಬ ಬಾ ಬೋ ಬೌ	ಬೋ ಪೌ ಬಾ ಭೋಗ
	ಭ ಭಾ ಭೋ ಭೌ	ಬಾಗರಿ ಬೋಧನೆ ಬೋಧಕ.
	ಮ ಮಾ ಮೋ ಮೌ	ಮೋಸಗಾರನಿಗೆ ಮೋಸ.
೪೭.	ಯ ಯಾ ಯೋ ಯೌ	ಲಾ ವೋ ಯೌ ಯಾ ರೋ
	ರ ರಾ ರೋ ರೌ	ವಾ ವೌ ಯೋ ರೌ ಲೋ
	ಲ ಲಾ ಲೋ ಲೌ	ವೋದು ವೋಡು ಲೌಕಿಕ.
	ವ ವಾ ವೋ ವೌ	ರೋಗ ಯೋಚನೆ ಪರಲೋಕ
೪೮.	ಶ ಶಾ ಶೋ ಶೌ	ಹಾ ಶೌ ಳೋ ಸೋ ಷೌ
	ಷ ಷಾ ಷೋ ಷೌ	ಶಾ ಷೋ ಳೌ ಹೌ ಶೋ
	ಸ ಸಾ ಸೋ ಸೌ	ಸೌ ಳಾ ಹೋ ಹೋಗು.
	ಹ ಹಾ ಹೋ ಹೌ	ಶೋಕ ಶೋಧನೆ ಸೋರೆಕಾಯಿ
	ಳ ಳಾ ಳೋ ಳೌ	ಸಹೋದರರ ಸಹಾಯ

೨೯.	ಅ	ಆ	ಇ	ಈ	ಉ	ಊ	ಎ	ಏ	ಐ	ಒ	ಓ	ಔ
೩೦.	ಕ	ಕಾ	ಕಿ	ಕೀ	ಕು	ಕೂ	ಕೆ	ಕೇ	ಕೈ	ಕೊ	ಕೋ	ಕೌ
	ಖ	ಖಾ	ಖಿ	ಖೀ	ಖು	ಖೂ	ಖೆ	ಖೇ	ಖೈ	ಖೊ	ಖೋ	ಖೌ
	ಗ	ಗಾ	ಗಿ	ಗೀ	ಗು	ಗೂ	ಗೆ	ಗೇ	ಗೈ	ಗೊ	ಗೋ	ಗೌ
	ಘ	ಘಾ	ಘಿ	ಘೀ	ಘು	ಘೂ	ಘೆ	ಘೇ	ಘೈ	ಘೊ	ಘೋ	ಘೌ
	ಙ	ಙಾ	ಙಿ	ಙೀ	ಙು	ಙೂ	ಙೆ	ಙೇ	ಙೈ	ಙೊ	ಙೋ	ಙೌ
೩೧.	ಚ	ಚಾ	ಚಿ	ಚೀ	ಚು	ಚೂ	ಚೆ	ಚೇ	ಚೈ	ಚೊ	ಚೋ	ಚೌ
	ಛ	ಛಾ	ಛಿ	ಛೀ	ಛು	ಛೂ	ಛೆ	ಛೇ	ಛೈ	ಛೊ	ಛೋ	ಛೌ
	ಜ	ಜಾ	ಜಿ	ಜೀ	ಜು	ಜೂ	ಜೆ	ಜೇ	ಜೈ	ಜೊ	ಜೋ	ಜೌ
	ಝ	ಝಾ	ಝಿ	ಝೀ	ಝು	ಝೂ	ಝೆ	ಝೇ	ಝೈ	ಝೊ	ಝೋ	ಝೌ
	ಞ	ಞಾ	ಞಿ	ಞೀ	ಞು	ಞೂ	ಞೆ	ಞೇ	ಞೈ	ಞೊ	ಞೋ	ಞೌ
೩೨.	ಟ	ಟಾ	ಟಿ	ಟೀ	ಟು	ಟೂ	ಟೆ	ಟೇ	ಟೈ	ಟೊ	ಟೋ	ಟೌ
	ಠ	ಠಾ	ಠಿ	ಠೀ	ಠು	ಠೂ	ಠೆ	ಠೇ	ಠೈ	ಠೊ	ಠೋ	ಠೌ
	ಡ	ಡಾ	ಡಿ	ಡೀ	ಡು	ಡೂ	ಡೆ	ಡೇ	ಡೈ	ಡೊ	ಡೋ	ಡೌ
	ಢ	ಢಾ	ಢಿ	ಢೀ	ಢು	ಢೂ	ಢೆ	ಢೇ	ಢೈ	ಢೊ	ಢೋ	ಢೌ
	ಣ	ಣಾ	ಣಿ	ಣೀ	ಣು	ಣೂ	ಣೆ	ಣೇ	ಣೈ	ಣೊ	ಣೋ	ಣೌ

೫೩.	ತ	ತಾ	ತಿ	ತೀ	ತು	ತೂ	ತೆ	ತೇ	ತೈ	ತೊ	ತೋ	ತೌ
	ಥ	ಥಾ	ಥಿ	ಥೀ	ಥು	ಥೂ	ಥೆ	ಥೇ	ಥೈ	ಥೊ	ಥೋ	ಥೌ
	ದ	ದಾ	ದಿ	ದೀ	ದು	ದೂ	ದೆ	ದೇ	ದೈ	ದೊ	ದೋ	ದೌ
	ಧ	ಧಾ	ಧಿ	ಧೀ	ಧು	ಧೂ	ಧೆ	ಧೇ	ಧೈ	ಧೊ	ಧೋ	ಧೌ
	ನ	ನಾ	ನಿ	ನೀ	ನು	ನೂ	ನೆ	ನೇ	ನೈ	ನೊ	ನೋ	ನೌ
೫೪.	ಪ	ಪಾ	ಪಿ	ಪೀ	ಪು	ಪೂ	ಪೆ	ಪೇ	ಪೈ	ಪೊ	ಪೋ	ಪೌ
	ಫ	ಫಾ	ಫಿ	ಫೀ	ಫು	ಫೂ	ಫೆ	ಫೇ	ಫೈ	ಫೊ	ಫೋ	ಫೌ
	ಬ	ಬಾ	ಬಿ	ಬೀ	ಬು	ಬೂ	ಬೆ	ಬೇ	ಬೈ	ಬೊ	ಬೋ	ಬೌ
	ಭ	ಭಾ	ಭಿ	ಭೀ	ಭು	ಭೂ	ಭೆ	ಭೇ	ಭೈ	ಭೊ	ಭೋ	ಭೌ
	ಮ	ಮಾ	ಮಿ	ಮೀ	ಮು	ಮೂ	ಮೆ	ಮೇ	ಮೈ	ಮೊ	ಮೋ	ಮೌ
೫೫.	ಯ	ಯಾ	ಯಿ	ಯೀ	ಯು	ಯೂ	ಯೆ	ಯೇ	ಯೈ	ಯೊ	ಯೋ	ಯೌ
	ರ	ರಾ	ರಿ	ರೀ	ರು	ರೂ	ರೆ	ರೇ	ರೈ	ರೊ	ರೋ	ರೌ
	ಲ	ಲಾ	ಲಿ	ಲೀ	ಲು	ಲೂ	ಲೆ	ಲೇ	ಲೈ	ಲೊ	ಲೋ	ಲೌ
	ವ	ವಾ	ವಿ	ವೀ	ವು	ವೂ	ವೆ	ವೇ	ವೈ	ವೊ	ವೋ	ವೌ
೫೬.	ಶ	ಶಾ	ಶಿ	ಶೀ	ಶು	ಶೂ	ಶೆ	ಶೇ	ಶೈ	ಶೊ	ಶೋ	ಶೌ
	ಷ	ಷಾ	ಷಿ	ಷೀ	ಷು	ಷೂ	ಷೆ	ಷೇ	ಷೈ	ಷೊ	ಷೋ	ಷೌ
	ಸ	ಸಾ	ಸಿ	ಸೀ	ಸು	ಸೂ	ಸೆ	ಸೇ	ಸೈ	ಸೊ	ಸೋ	ಸೌ
	ಹ	ಹಾ	ಹಿ	ಹೀ	ಹು	ಹೂ	ಹೆ	ಹೇ	ಹೈ	ಹೊ	ಹೋ	ಹೌ
	ಳ	ಳಾ	ಳಿ	ಳೀ	ಳು	ಳೂ	ಳೆ	ಳೇ	ಳೈ	ಳೊ	ಳೋ	ಳೌ

೫೭. ಪಾಠ.

ಇಡು ಇದು ಒಲೆ ಮೊಳ ಓಡು ದಿನ
ಈಡು ಇರು ಓಲೆ ಒಳ ಓದು ದೀನ

ಅವನಿಗೆ ರೂಪಾಯಿ ಕೊಡಿರಿ; ಅವನು ಈಡು ಕೊಡುವನು. ಹಲಿಗೆ ಮೇಜಿನ ಮೇಲೆ ಇಡು. ಮೌನವಾಗಿ ಇರು. ಇದು ಶಾಳಿ, ಅದು ಮಾವು. ಅರಸನಿಗೆ ಕೂಲಿಯವನು ಈಡೋ? ಒಲೆ ಬಿಸಿ. ಓಲೆ ಬರಿ. ಮನೆಯ ಒಳಗೆ ಹೋಗು. ಅವಳ ಶೀರೆ ಯೆರಡು ಮೊಳ. ಪಾಠ ಓದು. ಮನೆಗೆ ಓಡು. ಈ ದಿನ ಬೇಡ. ದೀನನಿಗೆ ಘನ ಕೊಡು.

೫೮. ಪಾಠ.

ತಾರ ತರು ಥರ ಮೂರು ಕೆರೆ ಕೆಡು
ದಾರ ದಾರಿ ಧರಿಸು ನೂರು ಗೆರೆ ಕೇಡು

ಮೂರು ಆನೆಗಳೂ ನೂರು ಶಿಪಾಯರೂ ಬರುವರು. ಈ ದಾರಿ ಮನೆಗೆ, ಆ ದಾರಿ ಊರಿಗೆ. ಅರಸನು ಕಿರೀಟ ಧರಿಸುವನು. ದಾರ ಬೇಕು. ಪೈಶೆಗೆ ಯೆರಡು ತಾರ. ಇವನು ಪಾಮಾನು ತಾರನು; ಅವರು ತರುವರು. ಬಡಿಗೆಯವನಿಗೆ ಥರಥರದ ಮರ ಬೇಕು. ಆ ಕೆರೆಯೊಳಗೆ ಬಹಳ ನೀರು. ಗೆರೆ ಹಾಕು. ಕೇಡು ಮಾಡುವವರು ಕೆಡುವರು.

೫೯. ಪಾಠ.

ಕೋಟಿ ಕೋತಿ ಕೋಡಿ ಕೊಡೆ ಕೋಣೆ ಕೊನೆ
ಕೋಟೆ ಘೋಡಿ ಕೊಡಿ ಗೋಡೆ ಕೋಣ ಗೊನೆ

ಹದಿನೈದು ಘೊದಿಯೂ ಐದು ಘೊದಿಯೂ ಕೋಡಿ ಆ

ಗುವದು. ಕೋಣೆಯ ಯೆರಡು ಗೋಡೆ ಕೂಡಿಸಿದರೆ, ಕೋಣ ಆಗುವದು. ನೂರು ಸಾರಿ ನೂರು ಸಾವಿರ, ಕೋಟಿ ಆಗುವದು. ಕೋತಿ ಕಾಡಿನೊಳಗೆ ಬಹಳ. ಹುಡುಗರು ಬೈದರೆ, ಖೋಡಿ ಆಗುವರು. ನನಗೆ ಕೊಡೆ ಕೊಡಿ. ಕೊಡೆ ನನಗೆ ಬೇಕು; ನಿನಗೆ ಕೊಡೆ. ಶಿಪಾಯರು ಕೋಟೆ ಹಾಳು ಮಾಡಿದರು. ಆ ಕೊನೆಯ ಮೇಲೆ ಕಾಗೆ. ಈ ಗೊನೆಗೆ ನೂರು ಬಾಳೆ. ಕೋತಿಯ ಆಟ ಹುಡುಗರಿಗೆ ನೋಟ.

೬೦. ಪಾಠ.

ಕೂಟ	ಕೂಟು	ಕೂಡು	ಕೂಡ	ಕೋಡು	ಕೊಡ
ಕೂತ	ಗೂಟ	ಗೂಡು	ಗುಡುಗು	ಕೊಡು	ಕೊಡೆ

ಗೋಡೆಯ ಮೇಲೆ ಕೂಟು, ಕೂಟಿನ ಮೇಲೆ ಗೋಡೆ ಮಾಡಿದರೆ, ಮಾಳಿಗೆ ಆಗುವದು. ಆಟ ಆಡಿದರೆ, ಕೂಟ ಕೂಡುವರು. ಗಿಣಿಯ ಗೂಡು ತೂಗಿಸು. ಆರು ಯೇಳು ಕೂಡಿಸಿದರೆ, ಹದಿಮೂರು. ಕೋಳಿಯ ಗೂಡಿಗೆ ನರಿಗಳು ಬರುವವು. ಮಳೆ ಬರುವ ಮೊದಲು ಗುಡುಗು. ಕೊಡ ಒಡದರೆ, ನೀರು ಸುರಿಯುವದು. ಕೊಡೆ ಹರದರೆ, ಮಳೆ ಸುರಿಯುವದು. ದೇವರಿಗೆ ಘನ ಕೊಡು. ಆಡಿಗೆ ಯೆರಡು ಕೋಡು, ಕುರಿಗೆ ಕೋಡು ಇರದು. ಗೋಡೆಗೆ ಗೂಟ ಹೊಡಿ. ಹೊಸ ಪಾಠ ಮಾಡುವವರ ಕೂಡ ಕೂತುಕೋ. ಅವನು ಕೂತ ಕೋತಿಯ ಬಳಿಯ ಕೂತು ಆಡಿದನು.

ವಿರಾಮ.

೬೧. ಪಾಠ.

ಕ. ಕ್. ಅಕ್-ಕ. ಅಕ್-ಕಿ. ಅಕ್-ಷರ. ಚ-ಕ್ರ. ತಕ್-ಕಡಿ.
ನಕ್ಷೆ. ಪಕ್ಷಿ. ಭಕ್ತಿ. ರಕ್ತ. ರಕ್ಷಕ. ಶಕ್ತಿ.
ವಾಕ್ಯ. ಭಿಕ್ಷೆ. ಉಕ್ಕು. ಯುಕ್ತಿ. ಬೆಕ್ಕು.
ರೆಕ್ಕೆ. ಬಾಕ್ಕಸ. ಹುಕ್ಕು. ಕ್ರಮ. ಕ್ರಯ.
ಕ್ರೋಧ. ಕ್ಷಣ. ಅಪೇಕ್ಷೆ. ಕ್ಷೇಮ. ಕ್ಷೌರ.
ಖ. ಖ್. ದುಖ್-ಖ. ಲೆಖ್-ಖ. ರಾಖ್-ಖ. ಸೌಖ್-ಯ.
ಗ. ಗ್. ಅಗ್-ಗ. ಅಗ್-ನಿ. ತಗ್-ಗು. ದಗ್-ಧ. ಹಗ್ಗ.
ಮಗ್ಗ. ಆಗ್ಯೆ. ವಾಗ್ವಾದ. ವಿಗ್ರಹ.
ನೆಗ್ಗಿಲು. ಬಾಗ್ಗು. ಯೋಗ್ಯ. ಗ್ರಹಣ.
ಘ. ಘ್. ಅಘ್-ಘ. ಘ್ರಾಣ.

೬೨. ಪಾಠ.

ಚ. ಚ್. ಅಚ್-ಚು. ಕಚ್-ಚು. ಹಚ್-ಚು. ವಾಚ್-ಯ.
ಬಚ್ಚಲು. ಹಚ್ಚಡ. ಇಚ್ಛೆ. ಕಿಚ್ಚು.
ಬಿಚ್ಚು. ಉಚ್ಚರಿಸು. ಚುಚ್ಚು. ಮುಚ್ಚು.
ಹುಚ್ಚು. ಬೆಚ್ಚಗೆ. ಮೆಚ್ಚು. ವೆಚ್ಚ.
ಯೆಚ್ಚರಿಕೆ. ಹೊಚ್ಚಿಸು. ಚಾಚ್ಚಲು.
ಛ. ಛ್. ಇಛ್-ಛೆ. ಉಛ್-ವಾಸ. ತುಛ್-ಛೀಕರಿಸು.
ಜ. ಜ್. ಅಜ್-ಜ. ಅಜ್-ಜಿ. ಗಜ್-ಜಿ. ಮಜ್-ಜಿಗೆ.
ಲಜ್ಜೆ. ವಜ್ರ. ಪೂಜ್ಯ. ಗಾಜ್ಜು. ಜ್ವರ.
ವಿಜ್ಞಾಪನೆ. ಅಜ್ಞಾನ. ಜ್ಯೋತಿ.
ಝ. ಝ್. ಝುಝ್-ಝುರಿತ.

೬೩. ಪಾಠ.

ಟ. ಟ್. ಅಟ್-ಟ. ಕಟ್-ಟಳೆ. ಕಟ್-ಟಿಗೆ. ಬಟ್-ಟಲು.
ಘಟ್ಟ. ಶಟ್ಟು. ಧಟ್ಟಿ. ಪಟ್ಟಣ. ನಾಟ್ಯ.
ಟಿಟ್ಟಿಭ. ಶಿಟ್ಟು. ಜಟ್ಟು. ಪುಟ್ಟುವಳ್ಳಿ.
ಪೆಟ್ಟಿಗೆ. ಮೆಟ್ಲು. ತಾಟ್ಲು. ರಾಟ್ಟಿ.

ಠ. ಠ್. ಅಠ್-ಠವಣೆ.

ಡ. ಡ್. ಅಡ್-ಡ. ಕಡ್-ಡಿ. ಖಡ್-ಗ. ಗಡ್-ಡ. ಗಡ್ಡೆ.
ಜಡ್ಡು. ಬಡ್ಡಿ. ಕಾಡ್ಗ್ಯಾಣ. ಗಿಡ್ಡ.
ಗುಡ್ಡೆ. ದುಡ್ಡು. ಪೊಡ್ಡ. ದಾಡ್ಡ.

ಣ. ಣ್. ಸಣ್ಣ. ನಾಣ್ಯ. ಪುಣ್ಯ. ಸುಣ್ಣ. ಬೆಣ್ಣೆ.
ಅಣ್-ಣ. ಕಣ್-ಣು. ಬಣ್-ಣ. ಮಣ್-ಣು.

೬೪. ಪಾಠ.

ತ. ತ್. ಅತ್-ತೆ. ಕತ್-ತಲೆ. ಕತ್-ತಿ. ನಕ್ಷತ್-ರ. ಬತ್-ತಿ.
ರತ್ನ. ಶತ್ರು. ಸತ್ಯ. ಆತ್ಮ. ಪಾತ್ರೆ.
ರಾತ್ರಿ. ಚಿತ್ರ. ನಿತ್ಯ. ಉತ್ತರ. ಉತ್ಪತ್ತಿ.
ಪುತ್ರ. ಸುತ್ತಿಗೆ. ಸೂತ್ರ. ಯೆತ್ತು. ಪಾತ್ರ.
ತ್ರಾಣ. ತ್ರಿಯ್ಯೇಕ. ತ್ವರಿತ. ವಕ್ತ್ರ.

ದ. ದ್. ಗದ್-ದಿಗೆ. ತದ್-ಭವ. ಪದ್-ಧತಿ. ಮದ್ದು.
ಸದ್ಗುಣ. ವಾದ್ಯ. ದರಿದ್ರ. ದ್ರಾಕ್ಷೆ.
ಬುದ್ಧಿ. ಮುದ್ದೆ. ಸಮುದ್ರ. ದ್ವಾರ.

ಧ. ಧ್. ಅಧ್-ಯಕ್ಷ. ಮಧ್-ಯ. ಧ್ಯಾನ.

ನ. ನ್. ಅನ್-ನ. ಅನ್-ಯ. ಕನ್-ನಡ. ಉನ್-ನತ.
ಇನ್ನು. ಭಿನ್ನ. ಸೈನ್ಯ. ಸಾನ್ನೆ.

೬೫. ಪಾಠ.

ಪ. ಪ್. ಅಪ್-ಪ. ಕಪ್-ಪೆ. ತಪ್-ಪು. ದಪ್ಪ. ಇಪ್ಪೆ.
ಆಪ್ತ. ಉಪ್ಪು. ತುಪ್ಪ. ಕ್ಲುಪ್-ತ. ಗುಪ್ತ.
ತಿಪ್ಪೆ. ಕೊಪ್ಪರಿಗೆ. ಸೊಪ್ಪು. ಪ್ರತ್ಯೇಕ.
ಪ್ರಯತ್ನ. ಪ್ರಳಯ. ಪ್ರಾಯ. ಪ್ರೀತಿ.

ಬ. ಬ್. ಕಬ್-ಬಿಣ. ಕಬ್-ಬು. ದಬ್-ಬಣ. ಲಬ್-ಧ.
ಶಬ್ದ. ಹಬ್ಬ. ಇಬ್ಬರು. ಹೆಬ್ಬಾಗಿಲು.
ಗುಬ್ಬಿ. ಹೆಬ್ಹಾವು. ಖಾಬ್ಬರಿ.

ಭ. ಭ್. ಅಭ್-ರ. ಅಭ್-ಯಾಸ. ಶುಭ್-ರ.

ಮ. ಮ್. ಅಮ್-ಮ. ಕಮ್-ಬಳಿ. ಕಮ್-ಭ. ಚಮ್-ಬು.
ತಮ್ಪು. ರಮ್ಯ. ಹಮ್ಮು. ಕೆಮ್ಮು.

೬೬. ಪಾಠ.

ಯ. ಯ್. ಅಯ್-ಯ. ಮುಯ್-ಯಿ. ಹಾಯ್-ಯು.

ರ. ರ್. ಅರ್-ಜಿ. ಅರ್-ಥ. ಅರ್-ಧ. ಕರ್-ಕರೆ. ಕರ್-ಮ.
ಕರ್ತನು. ಖರ್ಚು. ಖರ್ಜೂರ. ಗರ್ವ. ಚರ್ಮ.
ತರ್ಕ. ತಾತ್ಪರಿಯ. ಧರ್ಮ. ಪರ್ವತ. ಮರ್ಮ.
ಮರ್ಯಾದೆ. ವರ್ಷ. ಧೈರ್ಯ. ಪ್ರಾರ್ಥನೆ.
ನಿರ್ಮಲ. ಪೂರ್ವ. ಸೂರ್ಯ. ದೀರ್ಘ.

ಲ. ಲ್. ಅಲ್-ಪ. ಕಲ್-ಲು. ಜಲ್-ಮ. ಪಲ್-ಯ.
ಕಲ್ಪನೆ. ಕಲ್ಮಷ. ಹಲ್ಲು. ಹುಲ್ಲು.
ಪಾಲ್ಕಿ. ಬಿಲ್ಲು. ಮೌಲ್ಯ. ಮೆಲ್ಲಗೆ.

ವ. ವ್. ಅವ್-ವ. ಅವ್-ಯಯ. ದ್ರವ್-ಯ. ತೀವ್ರ.
ರುವ್ವಿ. ವ್ಯಾಕರಣ. ವ್ಯಾಪಾರ. ವ್ರಯ.

೬೭. ಪಾಠ.

ಶ. ಶ್. ಅಶ್-ವ. ಅಶ್-ವತ್‌ಥ. ಪಶ್-ಚಿಮ. ಪ್‌ರಶ್‌ನೆ.
ಆಶ್‌ಚರ್‌ಯ. ವಿಶ್‌ವಾಸ. ಐಶ್‌ವರ್‌ಯ.
ಷ. ಷ್. ಅಷ್-ಟು. ಇಷ್-ಟು. ಕಷ್-ಟ. ನಿಷ್-ಫಲ.
ನಷ್‌ಟ. ನಿಷ್‌ಕರ್‌ಷೆ. ರ್ಯಾಗಿಷ್‌ಠ. ಶ್‌ರೇಷ್‌ಠ.
ಸ. ಸ್. ಮನಸ್-ಸು. ಹಾಸ್-ತ. ಆಸ್-ತಿ. ವಸ್-ತ್‌ರ.
ಶಾಸ್‌ತ್‌ರ. ಶಸ್‌ತ್‌ರ. ಸ್‌ತ್‌ರೀ. ಸ್‌ತಮ್‌ಭ. ಸ್‌ಥಳ.
ಸ್‌ನೇಹ. ಸ್‌ವಲ್‌ಪ. ಸ್‌ವಸ್‌ಥ. ಸ್‌ವಾಧೀನ.
ಹ. ಹ್. ಬ್‌ರಾಹ್-ಮಣ. ಮಧ್‌ಯಾಹ್-ನ. ಹ್‌ಯಾಗೆ.
ಳ. ಳ್. ಕಳ್-ಳ. ಹಳ್-ಳ. ಹಳ್-ಳಿ. ತಳ್-ಮೆ. ಬೆಳ್-ಳಿ.
ಮುಳ್‌ಳು. ನೀರುಳ್‌ಳಿ. ಬೆಳ್‌ಳುಳ್‌ಳಿ. ಟೊಳ್‌ಳು.

೬೮. ಪಾಠ.

ಋಕಾರ. ಋಣ. ಕ್‌ಋಪೆ. ಗ್‌ಋಹ. ತ್‌ಋಪ್‌ತಿ. ದ್‌ಋಢ.
ಪ್‌ಋಥ್‌ವಿ. ಮ್‌ಋಗ. ಮ್‌ಋತ. ವ್‌ಋಕ್‌ಷ.
ವ್‌ಋದ್‌ಧಿ. ಸ್‌ಋಷ್‌ಟಿ. ಹ್‌ಋದಯ.

ಅನುಸ್‌ವಾರ.

೦= ಙ್. ಅಂಕೆ=ಅಙ್‌ಕೆ. ಅಂಗಡಿ. ಬೆಂಕಿ. ಮುಂಗೈ.
೦= ಞ್. ಅಂಚು=ಅಞ್‌ಚು. ಚಂಚಲ. ಅಂಜೂರ.
೦= ಣ್. ಅಂಟು=ಅಣ್‌ಟು. ಶುಂಠಿ. ಗಂಡ. ಬೆಂಣೆ.
೦= ನ್. ಅಂತ್‌ಯ.=ಅನ್‌ತ್‌ಯ. ಸಂತೆ. ಮುಂದೆ. ಅಂನ.
೦=ಮ್. ಅಂಬು=ಅಮ್‌ಬು. ಕಂಬಳಿ. ಸ್‌ತಂಭ. ಕೆಂಮ.
ನಿಜ ಅನುಸ್‌ವಾರ. ಸಂಯಮ. ಸಂರಕ್‌ಷಣೆ. ಸಂಲಾಪ.
ಸಂವತ್‌ಸರ. ಸಂಶಯ. ಮಾಂಸ. ಸಿಂಹ.

೬೯. ಪಾಠ.

ವಿಸರ್ಗ. ರೇಫ.

ಃ ಅಃ. ಅಂತಃಕರಣ. ಪ್ರತಃಕಾಲ. ಪುನಃಸ್ಥಾಪನೆ.
ಮನಃಪೂರ್ವಕವಾಗಿ. ನಿಃಸ್ಪೃಹ.
ರ್=೯. ಅರ್‌ಜಿ=ಅರ್ಜಿ. ಅರ್‌ಥ=ಅರ್ಥ. ಮಾರ್ಗ.
ಕರ್ಕರೆ. ಖರ್ಜೂರ. ತಾತ್ಪರ್ಯ. ಪರ್ವತ. ವರ್ಷ.
ಮರ್ಯಾದೆ. ಪ್ರಾರ್ಥನೆ. ದೀರ್ಘ. ವರ್ತಮಾನ.
ಸರ್ಪ. ಶೌರ್ಯ. ಕಾರ್ಯ. ಸಮರ್ಥ. ಪಾರ್ಥಿಸಿರಿ.

ನೀತಿಗೋಸ್ಕರ ಹಸಿದು ದಾಹ ಪಡುವವರು ಭಾಗ್ಯವಂತರು. ಯಾಕಂದರೆ ಅವರು ತೃಪ್ತಿ ಹೊಂದುವರು.

ಶುದ್ಧ ಹೃದಯ ಉಳ್ಳವರು ಭಾಗ್ಯವಂತರು. ಯಾಕಂದರೆ ಅವರು ದೇವರಂನು ನೋಡುವರು.

ಸೂರ್ಯವು ಪ್ರಾತಃಕಾಲದಲ್ಲಿ ಉದಯಿಸಿ, ಸಾಯಂಕಾಲದಲ್ಲಿ ಅಸ್ತಮಿಸುತ್ತದೆ.

ಕರ್ತನು ಸರ್ವರಿಗೆ ಅಂತಃಕರಣ ತೋರಿಸುತ್ತಾನೆ.

ಕಥೆಗಳು.

೭೦. ಪಾಠ.

ವೊಂದು ಊರಿನಲ್ಲಿ ಕುರುಡರು ಮಾತ್ರವೇ ಇದ್ದರಂತೆ. ವೊಂದಾನೊಂದು ದಿನ ವೊಂದು ಆನೆ ಅಲ್ಲಿಗೆ ಬಂತು. ಆನೆ ಬಂದದೆ ಯೆಂತಾ ಯೆಲ್ಲರೂ ಕೂಗಿ, ಪರೀಕ್ಷಿಸ ಹೋದರು. ಆನೆ ಹ್ಯಾಗೆ ಅದೆಯಪ್ಪಾ ಯೆಂತಾ ತಂಮೊಳಗೆ ಹೇಳಿ ಮುಟ್ಟಿದರು. ಕಾಲು ಹಿಡಿದವನು,

ಅದು ಖಂಬದ ಹಾಗೆ ಅದೆ ಅಂದಾ; ಸುಂಡ್ಲಿ ಹಿಡಿದವನು, ಬಾಳೆಯಾಂತೆ ಅದೆ ಅಂದಾ; ಕಿವಿ ಮುಟ್ಟಿದವನು, ಬೀಸಣಿಗೆಯ ಹಾಗೆ ಅಂದಾ; ಬಾಲ ಹಿಡಿದವನು, ಹಾವಿನಂತೆ ಅಂದಾ. ಮತ್ತೆ ನಾನು ಸಮ, ನಾನು ಸಮ ಅಂತಾ ಜಗಳಾಡಿದರು. ಆಗ್ಯೆ ಆನೆಯ ಮಾವತನು, ನೀವೆಲ್ಲರೂ ಸಮ, ನೀವೆಲ್ಲರೂ ತಪ್ಪು ಅಂತಾ ಹೇಳಿದನು. ಮಕ್ಕಳೇ, ಅದು ಹ್ಯಾಗೆ?

೨೧. ಪಾಠ.

ಒಬ್ಬನಿಗೆ ಹೆಡ್ಡ ಚಾಕರನಿದ್ದನು. ಅವನು ಒಂದು ಸಾರಿ ಯೆಂಣೆ ತರಲಿಕ್ಕೆ ಹೋದಾ. ಹಣ ಕೊಟ್ಟು, ಗಿಂಡಲಿನಲ್ಲಿ ಅಂಗಡಿಗಾರನಿಂದ ಯೆಂಣೆ ತುಂಬಿಸಿ, ಈಗ ಕುಸರಿ ಕಾಡೆಯಾ ಅಂದನು. ಕುಸರಿಗೆ ಜಾಗ ಯೆಲ್ಲಿಯೋ ಯೆಂತಾ, ಅಂಗಡಿಗಾರನು ಹೇಳಲಾಗಿ, ಇಗೋ ಇಲ್ಲಿ ಹಾಕು ಯೆಂತಾ ಹೇಳಿ, ಗಿಂಡಲಿನಲ್ಲಿದ್ದ ಯೆಂಣೆ ಯೆಲ್ಲಾ ಅಂಗಡಿಯವನ ಮರಗಿಯಲ್ಲಿ ಚೆಲ್ಲಿ ಬಿಟ್ಟು, ಗಿಂಡಲಿನ ಅಡಿ ತೋರಿಸಿದನು. ಅಂಗಡಿಗಾರನು ಮನಸಿನಲ್ಲಿ ನಗಾಡಿ, ಗಿಂಡಲಿನ ಅಡಿ ಯೆಂಣೆ ತುಂಬಿಸಿ ಕಳುಹಿಸಿದನು. ಹೆಡ್ಡ ಮನೆಗೆ ಬರಲು, ಯಜಮಾನನು ದುಡ್ಡಿಗೆ ಅಷ್ಟೇ ಯೆಂಣೆಯೋ ಅಂದಾಗ, ಅಡಿ ಮಗಚಿ, ಅಕೋ ಇಲ್ಲಿ ತುಂಬ ಅದೆ ಯೆಂಬದಾಗಿ ಹೇಳಿದನು. ಆಗ್ಯೆ ಅಡಿಯಲ್ಲಿದ್ದ ಯೆಂಣೆ ನೆಲದಲ್ಲಿ ಚೆಲ್ಲಿ ಹೋಯಿತು. ಮಕ್ಕಳೇ ಹೆಡ್ಡ ದುಡ್ಡಿಗೆ ಯೆಷ್ಟು ಯೆಂಣೆ ತಂದಾ?

ಒತ್ತಕ್ಷರಗಳು.

೨೧. ಪಾಠ.

ಕ್‌ಕ	ಕ್ಕ	ಅಕ್ಕ.	ತ್‌ಕ	ತ್ಕ	ಉತ್ಕ.	ಗ್‌ಗ	ಗ್ಗ	ಮಗ್ಗ.
ಕ್‌ಕಿ	ಕ್ಕಿ	ಅಕ್ಕಿ.	ಲ್‌ಕಿ	ಲ್ಕಿ	ಪಾಲ್ಕಿ.	ಗ್‌ಗಿ	ಗ್ಗಿ	ಸುಗ್ಗಿ.
ಕ್‌ಕು	ಕ್ಕು	ಬೆಕ್ಕು.	ಷ್‌ಕ	ಷ್ಕ	ನಿಷ್ಕ.	ಗ್‌ಗು	ಗ್ಗು	ತಗ್ಗು.
ಕ್‌ಕೆ	ಕ್ಕೆ	ರೆಕ್ಕೆ.	ಸ್‌ಕು	ಸ್ಕು	ಮಸ್ಕು.	ಡ್‌ಗ	ಡ್ಗ	ಖಡ್ಗ.
ಕ್‌ಕಾ	ಕ್ಕಾ	ತಕ್ಕಾ.	ಖ್‌ಖ	ಖ್ಖ	ದುಖ್ಖ.	ಘ್‌ಘ	ಘ್ಘ	ಅಘ್ಘ.

ಬಾಕ್ಕಸ. ಉತ್ಕಲಾ. ಕಲ್ಕುಟಕ. ಮ್ಯೇಲ್ಕಟ್‌ಟು. ನಿಷ್ಕರ್ಷೆ. ತಾಸ್ಕರ.
ಪುಷ್ಕಳ. ಉಲ್ಕಾಪಾತ. ರಾಖ್ಖ. ಮುಗ್ಗು. ಉದ್ಘಾಟನೆ. ಕಾಡ್ಗ್ಯಾಣ.
ಮೊಗ್ಗೆ. ಲೆಖ್ಖ. ಸಕ್ಕರೆ. ವಾಖ್ಖ್ಯಾನಿಸು. ತಕ್ಕ. ಬಾಗ್ಗು. ಮಗ್ಗಲು.

೨೨. ಪಾಠ.

ಚ್‌ಚ	ಚ್ಚ	ಅಚ್ಚ.	ಶ್‌ಚ	ಶ್ಚ	ಆಶ್ಚ.	ಜ್‌ಜ	ಜ್ಜ	ಅಜ್ಜ.
ಚ್‌ಚಿ	ಚ್ಚಿ	ಪಾಚ್ಚಿ.	ಶ್‌ಚಿ	ಶ್ಚಿ	ಪಶ್ಚಿ.	ಜ್‌ಜಿ	ಜ್ಜಿ	ಅಜ್ಜಿ.
ಚ್‌ಚು	ಚ್ಚು	ಕಿಚ್ಚು.	ಛ್‌ಛೆ	ಛ್ಛೆ	ಇಛ್ಛೆ.	ಬ್‌ಜ	ಬ್ಜ	ಕುಬ್ಜ.
ಚ್‌ಚೆ	ಚ್ಚೆ	ಪಚ್ಚೆ.	ಚ್‌ಛೆ	ಚ್ಛೆ	ಇಚ್ಛೆ.	ಝ್‌ಝು	ಝ್ಝು	ಜಝ್ಝು.
ಚ್‌ಚಾ	ಚ್ಚಾ	ಪಾಚ್ಚಾ.	ಶ್‌ಛೆ	ಶ್ಛೆ	ಅಶ್ಛೆ.	ಜ್‌ಞಾ	ಜ್ಞಾ	ಜ್ಞಾನ.

ಆಶ್ಚರ್ಯ. ಪಾಚ್ಚಿಸು. ನಿಶ್ಚಯ. ತುಛ್ಛೀಕರಿಸು. ಸ್ವೇಛ್ಛೆ.
ಜಝ್ಝರಿತ. ಸಂಜ್ಞೆ. ಪಶ್ಚಿಮ. ಶಿರಶ್ಛೇದ. ಉಜ್ಜ. ಲಜ್ಜೆ.
ಅಬ್ಜ. ಪ್ರಜ್ಞೆ. ಪಶ್ಚಾತ್ತಾಪ. ವಿಜ್ಞಾಪನೆ. ಸಜ್ಜೆ. ಪುಚ್ಚು.

೭೪. ಪಾಠ.

ಟ್‌ಟ	ಟ್ಟ	ಅಟ್ಟ.	ಷ್‌ಟ	ಷ್ಟ	ನಷ್ಟ.	ಡ್‌ಡ	ಡ್ಡ	ಅಡ್ಡ.
ಟ್‌ಟಿ	ಟ್ಟಿ	ರೊಟ್ಟಿ.	ಷ್‌ಟು	ಷ್ಟು	ಅಷ್ಟು.	ಡ್‌ಡಿ	ಡ್ಡಿ	ಅಡ್ಡಿ.
ಟ್‌ಟು	ಟ್ಟು	ಶಿಟ್ಟು.	ಷ್‌ಟೆ	ಷ್ಟೆ	ಅಷ್ಟೆ.	ಣ್‌ಣ	ಣ್ಣ	ಅಣ್ಣ.
ಟ್‌ಟೆ	ಟ್ಟೆ	ಹೊಟ್ಟೆ.	ಠ್‌ಠ	ಠ್ಠ	ಅಠ್ಠ.	ಣ್‌ಣು	ಣ್ಣು	ಮಣ್ಣು.
ಟ್‌ಟೊ	ಟ್ಟೊ	ಕಟ್ಟೊ.	ಷ್‌ಠ	ಷ್ಠ	ಷಷ್ಠ.	ಷ್‌ಣ	ಷ್ಣ	ಉಷ್ಣ.

ಪಟ್ಟಣ. ಹೊಟ್ಟೆಕಿಚ್ಚು. ಸಾಷ್ಟಾಂಗ. ಯೆಷ್ಟು. ಅಠ್ಠವಣೆ.
ರೋಗಿಷ್ಟ. ದುಡ್ಡು. ಗುಡ್ಡ. ಬೆಣ್ಣೆ. ಕ್‌ಋಷ್ಣ. ಗರ್ವಿಷ್ಠ.
ದೊಡ್ಡ. ಕುಷ್ಟ. ಷಟ್ಟ ಹುಟ್ಟುವಳಿ. ಹುಣ್ಣಿಮೆ. ಕಣ್ಣು.

೭೫. ಪಾಠ.

ತ್‌ತ	ತ್ತ	ಅತ್ತ.	ದ್‌ದ	ದ್ದ	ಉದ್ದ.	ತ್‌ನ	ತ್ನ	ರತ್ನ.
ತ್‌ತಿ	ತ್ತಿ	ಕತ್ತಿ.	ಬ್‌ದ	ಬ್ದ	ಶಬ್ದ.	ಪ್‌ನ	ಪ್ನ	ಸಾಪ್ನ.
ಕ್‌ತ	ಕ್ತ	ರಕ್ತ.	ದ್‌ಧಿ	ದ್ಧಿ	ಬುದ್ಧಿ.	ಲ್‌ನ	ಲ್ನ	ಆಲ್ನ.
ಪ್‌ತ	ಪ್ತ	ಗುಪ್ತ.	ಗ್‌ಧ	ಗ್ಧ	ದಗ್ಧ.	ಶ್‌ನೆ	ಶ್ನೆ	ಅಶ್ನೆ.
ಸ್‌ತಿ	ಸ್ತಿ	ಆಸ್ತಿ.	ನ್‌ನ	ನ್ನ	ನನ್ನ.	ಸ್‌ನೆ	ಸ್ನೆ	ಸ್ನೇಹ.
ಸ್‌ಥ	ಸ್ಥ	ಸ್ಥಳ.	ಗ್‌ನಿ	ಗ್ನಿ	ಅಗ್ನಿ.	ಹ್‌ನ	ಹ್ನ	ಆಹ್ನ.

ಕತ್ತೆ. ಭಕ್ತಿ. ಪುಸ್ತಕ. ಸ್ತುತಿ. ಸಂಸ್ಥಾನ. ಸ್ಥಿತಿ. ಮುದ್ದೆ. ಯುದ್ಧ.
ಇನ್ನೂರು. ಲಗ್ನ. ಯತ್ನ. ಸ್‌ವಪ್ನ. ಕಾಲ್ನಡೆ. ಪ್‌ರಶ್ನೆ.
ಸ್ನಾನ. ಮಧ್‌ಯಾಹ್ನ. ಮುತ್ತು. ಸ್ತೋತ್‌ರ. ಬನ್ನಿರಿ. ಸ್ಥೂಲ.

೨೬. ಪಾಠ.

ಪ್‌ಪ ಪ್ಪ ಅಪ್ಪ	ತ್‌ಫ ತ್ಫ ಸತ್ಫ	ಮ್‌ಮ ಮ್ಮ ಅಮ್ಮ
ಪ್‌ಪಿ ಪ್ಪಿ ಅಪ್ಪಿ	ಷ್‌ಫ ಷ್ಫ ನಿಷ್ಫ	ಗ್‌ಮ ಗ್ಮ ಯುಗ್ಮ
ಪ್‌ಪು ಪ್ಪು ಕಪ್ಪು	ಬ್‌ಬ ಬ್ಬ ಪಾಬ್ಬ	ತ್‌ಮ ತ್ಮ ಆತ್ಮ
ಪ್‌ಪೆ ಪ್ಪೆ ಇಪ್ಪೆ	ಬ್‌ಬಿ ಬ್ಬಿ ಗುಬ್ಬಿ	ಲ್‌ಮ ಲ್ಮ ಜಲ್ಮ
ತ್‌ಪ ತ್ಪ ಉತ್ಪ	ದ್‌ಬ ದ್ಬ ಉದ್ಬ	ಶ್‌ಮ ಶ್ಮ ಶ್ಮಶ್ರು
ಲ್‌ಪ ಲ್ಪ ಅಲ್ಪ	ಲ್‌ಬ ಲ್ಬ ಕಾಲ್ಬ	ಷ್‌ಮ ಷ್ಮ ಶುಷ್ಮ
ಸ್‌ಪ ಸ್ಪ ಸ್ಪಷ್ಟ	ದ್‌ಭ ದ್ಭ ಶದ್ಭ	ಸ್‌ಮ ಸ್ಮ ಸ್ಮಯ
ಷ್‌ಪ ಷ್ಪ ಪುಷ್ಪ	ಲ್‌ಭಾ ಲ್ಭಾ ಎಲ್ಭಾ	ಹ್‌ಮ ಹ್ಮ ಆಹ್ಮ

ವಾಪ್ಪಿಗೆ. ಉತ್ಪತ್ತಿ. ಕಾಲ್ಪೆಂಡೆ. ಆಸ್ಪದ. ನಿಷ್ಫಾವ. ಸತ್ಫಲ. ಉದ್ಬಲ. ಕಾಲ್ಬಳೆ. ಶದ್ಭವ. ಮ್ಯೇಲ್ಭಾಗ. ಅದ್ಭುತ. ಯೆಮ್ಮೆನಿಷ್ಫಲ. ಶ್ಲೇಷ್ಮ. ವಿಸ್ಮಯ. ಬ್‌ರಾಹ್ಮಣ. ಕಿಬ್ಬೊಟ್ಟೆ. ಶ್ಮಶ್‌ರು. ಕಪ್ಪೆ.

೨೭. ಪಾಠ.

ಯ್‌ಯ ಯ್ಯ ಅಯ್ಯ	ಷ್‌ಯ ಷ್ಯ ಆಷ್ಯ	ಥ್‌ಯ ಥ್ಯ ತಿಥ್ಯ
ಯ್‌ಯಿ ಯ್ಯಿ ಮುಯ್ಯಿ	ಚ್‌ಯ ಚ್ಯ ವಾಚ್ಯ	ದ್‌ಯ ದ್ಯ ವಿದ್ಯ
ಯ್‌ಯು ಯ್ಯು ಕಾಯ್ಯು	ಜ್‌ಯ ಜ್ಯ ಪೂಜ್ಯ	ಧ್‌ಯ ಧ್ಯ ಮಧ್ಯ
ಕ್‌ಯ ಕ್ಯ ವಾಕ್ಯ	ಟ್‌ಯ ಟ್ಯ ನಾಟ್ಯ	ನ್‌ಯ ನ್ಯ ಸೈನ್ಯ
ಖ್‌ಯ ಖ್ಯ ಆಖ್ಯ	ಣ್‌ಯ ಣ್ಯ ಪುಣ್ಯ	ಪ್‌ಯಾ ಪ್ಯಾ ಪ್ಯಾದೆ
ಗ್‌ಯ ಗ್ಯ ಯೋಗ್ಯ	ತ್‌ಯ ತ್ಯ ಸತ್ಯ	ಭ್‌ಯಾ ಭ್ಯಾ ಅಭ್ಯಾ

ಮ್‌ಯ ಮ್ಯ ರಮ್ಯ	ವ್‌ಯ ವ್ಯ ವ್ಯರ್ಥ	ಸ್‌ಯ ಸ್ಯ ಹಾಸ್ಯ
ರ್‌ಯ ರ್ಯ ಧೈರ್ಯ	ಶ್‌ಯ ಶ್ಯ ದಿಶ್ಯ	ಹ್‌ಯ ಹ್ಯ ಹ್ಯಾಗೆ
ಲ್‌ಯ ಲ್ಯ ಮೂಲ್ಯ	ಷ್‌ಯ ಷ್ಯ ಶಿಷ್ಯ	ಳ್‌ಯ ಳ್ಯ ಪಾಳ್ಯ.

ಪಾಯ್ಯ. ಆಖ್ಯಾನ. ಆಗ್ಯ. ಶ್ಲಾಘ್ಯ. ಅಮಾತ್ಯ. ಜ್ಯೋತಿ.
ಆತಿಥ್ಯ. ಉದ್ಯೋಗ. ಧ್ಯಾನ. ನ್ಯಾಯ. ಅಭ್ಯಾಸ. ಪಾವ್ಯ.
ಕೌತ್ಯ. ತಾರತಮ್ಯ. ಅವ್ಯಯ. ಆಲಸ್ಯ. ಶ್ಯಾಮ. ವೈದ್ಯ.

೨೮. ಪಾಠ.

ರ್‌ರೆ ರ್ರೆ ಪರ್ರೆ	ದ್‌ರ ದ್ರ ಭದ್ರ	ಹ್‌ರೆ ಹ್ರೆ ಹ್ರೇಷೆ
ಕ್‌ರ ಕ್ರ ಕ್ರಮ	ಪ್‌ರ ಪ್ರ ವಿಪ್ರ	ಲ್‌ಲ ಲ್ಲ ಅಲ್ಲ
ಕ್‌ರಿ ಕ್ರಿ ಕ್ರಿಮಿ	ಬ್‌ರ ಬ್ರ ತಾಂಬ್ರ	ಕ್‌ಲ ಕ್ಲ ಶುಕ್ಲ
ಕ್‌ರೂ ಕ್ರೂ ಕ್ರೂರ	ಭ್‌ರ ಭ್ರ ಶುಭ್ರ	ಟ್‌ಲು ಟ್ಲು ಮೆಟ್ಲು
ಗ್‌ರಾ ಗ್ರಾ ಗ್ರಾಮ	ಮ್‌ರ ಮ್ರ ನಮ್ರ	ಡ್‌ಲೆ ಡ್ಲೆ ಕಡ್ಲೆ
ಘ್‌ರಾ ಘ್ರಾ ಘ್ರಾಣ	ವ್‌ರ ವ್ರ ತೀವ್ರ	ಪ್‌ಲ ಪ್ಲ ಪ್ಲವ
ಜ್‌ರ ಜ್ರ ವಜ್ರ	ಶ್‌ರ ಶ್ರ ಶ್ರಮೆ	ಮ್‌ಲ ಮ್ಲ ಆಮ್ಲ.
ತ್‌ರ ತ್ರ ಮಂತ್ರ	ಸ್‌ರ ಸ್ರ ಹಸ್ರ	ಶ್‌ಲೋ ಶ್ಲೋ ಶ್ಲೋಕ.

ಪರ್ರನೆ. ಚಕ್ರ. ಕ್ರೋಧ. ವಿಗ್ರಹ. ಗ್ರಂಥ. ಆಗ್ರಾಣ. ಗ್ರೀವ.
ಶತ್ರು. ದರಿದ್ರ ದ್ರವ್ಯ. ದ್ರಾಕ್ಷೆ. ಮುದ್ರೆ. ಪ್ರಕಾಶ. ಪ್ರೀತಿ.
ಶ್ರೇಷ್ಠ. ಶ್ರೋತ್ರ. ಸಹಸ್ರ. ಹ್ರಸ್ವ. ಹಲ್ಲ. ಹುಲ್ಲು. ಕ್ಲೀಬ.
ಪತ್ರ. ರಂಧ್ರ. ಮೆಲ್ಲಗೆ. ವಿಕ್ಲಬ. ಕಲ್ಲು. ಶ್ರೇಯ. ಮಲ್ಲಿಗೆ.

೪೯. ಪಾಠ.

ವ್‌ವ	ವ್ವ	ಅವ್ವ	ಧ್‌ವ	ಧ್ವ	ಅಧ್ವ	ಕ್‌ಷು	ಕ್ಷು	ಕ್ಷುದ್ರ
ಕ್‌ವ	ಕ್ವ	ಪಕ್ವ	ನ್‌ವ	ನ್ವ	ಅನ್ವ	ಕ್‌ಷೇ	ಕ್ಷೇ	ಕ್ಷೇಮ
ಗ್‌ವಾ	ಗ್ವಾ	ವಾಗ್ವಾ	ಲ್‌ವ	ಲ್ವ	ಪಲ್ವ	ಸ್‌ಸಾ	ಸ್ಸಾ	ನಿಸ್ಸಾ
ಭ್‌ವಾ	ಭ್ವಾ	ಉಭ್ವಾ	ಶ್‌ವ	ಶ್ವ	ಅಶ್ವ	ತ್‌ಸ	ತ್ಸ	ಮತ್ಸ
ಜ್‌ವ	ಜ್ವ	ಜ್ವರ	ಸ್‌ವ	ಸ್ವ	ಸ್ವಪ್ನ	ಪ್‌ಸ	ಪ್ಸ	ಅಪ್ಸ
ಡ್‌ವ	ಡ್ವ	ಶಾಡ್ವ	ಶ್‌ಶ	ಶ್ಶ	ನಿಶ್ಶ	ಳ್‌ಳ	ಳ್ಳ	ಕಳ್ಳ
ತ್‌ವ	ತ್ವ	ತ್ವಂತ್ವ	ಕ್‌ಷ	ಕ್ಷ	ಕ್ಷಣ	ಳ್‌ಳಿ	ಳ್ಳಿ	ಪಳ್ಳಿ
ದ್‌ವಾ	ದ್ವಾ	ದ್ವಾರ	ಕ್‌ಷಿ	ಕ್ಷಿ	ಸಾಕ್ಷಿ	ಳ್‌ಳು	ಳ್ಳು	ಮುಳ್ಳು

ರುಷ್ವಿ. ವಾಗ್ವಾವ. ಪ್ರಜ್ವಲ. ಉಭ್ವಾಸ. ಶಾಡ್ವಲ. ತ್ವರಿತ. ಶುದ್ಧತ್ವ. ಪಲ್ವಲ. ಐಶ್ವರ್ಯ. ಶಾಶ್ವತ. ಸ್ವರ್ಗ. ಸ್ವಭಾವ. ಸ್ವಾಮಿ. ಸ್ವೀಕಾರ. ಕ್ಷಾಮ. ಕ್ಷೌರ. ಮನಸ್ಸು. ನಿಸ್ಸಾರ. ಮತ್ಸರ. ತಪಸ್ಸು. ಅಪ್ಸರ.

೫೦. ಪಾಠ.

ಕ್‌ಋ	ಕೃ	ಕೃಪೆ	ದ್‌ಋ	ದೃ	ದೃಷ್ಟಿ	ವ್‌ಋ	ವೃ	ವೃಕ್ಷ
ಗ್‌ಋ	ಗೃ	ಗೃಹ	ನ್‌ಋ	ನೃ	ನೃಪ	ಶ್‌ಋ	ಶೃ	ಶೃಂಗ
ಘ್‌ಋ	ಘೃ	ಘೃತ	ಪ್‌ಋ	ಪೃ	ಪೃಥ್ವಿ	ಸ್‌ಋ	ಸೃ	ಸೃಷ್ಟಿ
ತ್‌ಋ	ತೃ	ತೃಪ್ತಿ	ಮ್‌ಋ	ಮೃ	ಮೃಗ	ಹ್‌ಋ	ಹೃ	ಹೃತ್ತು

ಮೃತ್ಯು. ಅಮೃತ. ಹೃದಯ. ಕೃತ್ರಿಮ. ದೃಷ್ಟಿ. ಕೃಷ್ಣ. ಶೃಂಗ.

ದೇವರಿಲ್ಲವೆಂದು ಮೂಢನು ತನ್ನ ಹೃದಯದಲ್ಲಿ ಹೇಳುತ್ತಾನೆ.

ಕರ್ತನು ಪರಲೋಕದಿಂದ ಮನುಷ್ಯರ ಮಕ್ಕಳನ್ನು ದೃಷ್ಟಿಸುತ್ತಾನೆ.

೪೧. ಪಾಠ.

ಷ್ಕ್ಋ ಷ್ಕೃ ದುಷ್ಕೃತ್ಯ
ಕ್ಷ್ಣ ಕ್ಷ್ಣ ತೀಕ್ಷ್ಣ
ತ್ಸ್ವ ತ್ಸ್ವ ತತ್ಸ್ವರ್ಣ
ತ್ಸ್ಮ್ಋ ತ್ಸ್ಮೃ ತತ್ಸ್ಮೃತಿ
ಕ್ಷ್ಮಿ ಕ್ಷ್ಮಿ ಲಕ್ಷ್ಮಿ
ರ್ಷ್ಮ ರ್ಷ್ಮ ವರ್ಷ್ಮ
ಟ್ಟ್ಯಾ ಟ್ಟ್ಯಾ ಷಟ್ಟ್ಯಾಗಿ
ರ್ತ್ಯ ರ್ತ್ಯ ಮರ್ತ್ಯ
ಲ್ಲ್ಯ ಲ್ಲ್ಯ ಅಲ್ಲ್ಯವತಾರ
ಲ್ಲ್ಯೂ ಲ್ಲ್ಯೂ ಯೆಲ್ಲ್ಯೂ
ಲ್ಕ್ಯ ಲ್ಕ್ಯ ಯಜ್ಞವಲ್ಕ್ಯ
ಸ್ತ್ಯ ಸ್ತ್ಯ ಅಗಸ್ತ್ಯ
ಸ್ಥ್ಯ ಸ್ಥ್ಯ ಸ್ವಾಸ್ಥ್ಯ

ಷ್ಟ್ಯೊ ಷ್ಟ್ಯೊ ಸೃಷ್ಟ್ಯೊಳಗೆ
ಕ್ಷ್ಯ ಕ್ಷ್ಯ ಲಕ್ಷ್ಯ
ರ್ಕ್ಷ್ಯ ರ್ಕ್ಷ್ಯ ತಾರ್ಕ್ಷ್ಯ
ಕ್ತ್ರ ಕ್ತ್ರ ವಕ್ತ್ರ
ಚ್ಚ್ರ ಚ್ಚ್ರ ಯೆಚ್ಚ್ರವಾಗಿ
ತ್ಪ್ರ ತ್ಪ್ರ ಸತ್ಪ್ರಕಾಶ
ಷ್ಕ್ರಿ ಷ್ಕ್ರಿ ದುಷ್ಕ್ರಿಯೆ
ಷ್ಟ್ರ ಷ್ಟ್ರ ಮಹಾರಾಷ್ಟ್ರ
ಸ್ತ್ರ ಸ್ತ್ರ ವಸ್ತ್ರ
ಸ್ತ್ರಿ ಸ್ತ್ರಿ ಸ್ತ್ರೀಯು
ಸ್ಪ್ರ ಸ್ಪ್ರ ನಸ್ಪ್ರಷ್ಟವ್ಯ
ತ್ತ್ವ ತ್ತ್ವ ಸತ್ತ್ವ
ರ್ದ್ಧ್ವ ರ್ದ್ಧ್ವ ಊರ್ದ್ಧ್ವ

ವಾಕ್ಯವಿಭಾಗದ ಸಂಜ್ಞೆಗಳು.

, ಗೀಟು ; ಸಾನ್ನೆ ಗೀಟು ? ಪ್ರಶ್ನೆ

. ಸಾನ್ನೆ ! ಸಂಬೋಧನ — ಗೆರೆ.

೮೧. ಪಾಠ.

ಬುದ್ಧಿಯುಳ್ಳ ಪ್ರಾಣಿಗಳು.

ನಾಲ್ಕು ಪ್ರಾಣಿಗಳು ಭೂಮಿಯಲ್ಲಿ ಸಂಣವುಗಳಾದಾಗ್ಯೂ, ವಿಶೇಷವಾದ ಬುದ್ಧಿಯಿಂದ ತುಂಬಿದವುಗಳಾಗಿವೆ. ಇರುವೆಗಳು ತ್ರಾಣಹೀನ ಜೀವಿಯಾದಾಗ್ಯೂ, ಬೇಸಿಗೆಯಲ್ಲಿ ತಮ್ಮ ರೊಟ್ಟಿಯನ್ನು ಇಟ್ಟುಕೊಳ್ಳುತ್ತವೆ. ಮೊಲಗಳು ಬಲಹೀನ ಜೀವಿಯಾದಾಗ್ಯೂ, ಬಂಡೆಯಲ್ಲಿ ತಮ್ಮ ಮನೆಗಳನ್ನು ಮಾಡುತ್ತವೆ. ಮಿಡಿತೆಗಳಿಗೆ ಅರಸನು ಇಲ್ಲ; ಆದಾಗ್ಯೂ ಅವು ದಂಡಾಗಿ ಹೊರಡುತ್ತವೆ. ಜಾಡವು ಕೈಗಳಿಂದ ಕೆಲಸ ಮಾಡಿ, ಅರಮನೆಗಳಲ್ಲಿಯೂ ಇರುತ್ತದೆ.

೮೨. ಪಾಠ.

ಇರುವೆ.

ಮೈಗಳ್ಳನೇ, ಇರುವೇ ಹತ್ತಿರ ಹೋಗಿ, ಅದರ ನಡತೆಯನ್ನು ನೋಡಿ, ಬುದ್ಧಿ ತಂದುಕೋ! ಇರುವೆಗೆ ನ್ಯಾಯಾಧಿಪತಿಯೂ ವಿಚಾರಕನೂ ಅಧಿಕಾರಿಯೂ ಇಲ್ಲದೆ, ಬೇಸಿಗೆ ಕಾಲದಲ್ಲಿ ತನ್ನ ರೊಟ್ಟಿಯನು ಇಟ್ಟುಕೊಂಡು, ಸುಗ್ಗಿಯಲ್ಲಿ ತನ್ನ ಆಹಾರವನ್ನು ಕೂಡಿಸುತ್ತದೆ. ಮೈಗಳ್ಳನೇ, ಯೆಷ್ಟು ಮಟ್ಟಿಗೆ ನಿದ್ರೆಗೈಯುವಿ? ಯಾವಾಗ ನಿದ್ರೆಯಿಂದ ಯೇಳುವಿ? ಸ್ವಲ್ಪ ನಿದ್ರೆ, ಸ್ವಲ್ಪ ತೂಗಡಿಕೆ, ಕೈಗಳನ್ನು ಕೂಡಿಸಿ ಮಲಗಲಿ ಯೆನಲು, ನಿನ್ನ ಬಡತನವು ಪ್ರಯಾಣಸ್ಥನ ಹಾಗೆಯೂ, ನಿಂನ ದರಿದ್ರವು ಯುದ್ಧಸ್ಥನ ಹಾಗೆಯೂ ಬರುವದು.

ಅಂಕೆಗಳು.

ವೊಂದು	೧	1	ಇಪ್ಪತ್ತು	೨೦	20
ಯೆರಡು	೨	2	ಮೂವತ್ತು	೩೦	30
ಮೂರು	೩	3	ನಾಲ್ವತ್ತು	೪೦	40
ನಾಲ್ಕು	೪	4	ಐವತ್ತು	೫೦	50
ಐದು	೫	5	ಆರ್ವತ್ತು	೬೦	60
ಆರು	೬	6	ಯೆಪ್ಪತ್ತು	೭೦	70
ಯೇಳು	೭	7	ಯೆಂಭತ್ತು	೮೦	80
ಯೆಂಟು	೮	8	ತೊಂಭತ್ತು	೯೦	90
ವೊಂಭತ್ತು	೯	9	ನೂರು	೧೦೦	100
ಹತ್ತು	೧೦	10	ಸಾವಿರ	೧೦೦೦	1000

ಸ್ವರಗಳು.

ಅ ಆ ಇ ಈ ಉ ಊ ಋ ಎ ಏ ಐ
ಒ ಓ ಔ ಅಂ ಅಃ

ವ್ಯಂಜನಗಳು.

ಕವರ್ಗ —	ಕ	ಖ	ಗ	ಘ	ಙ	
ಚವರ್ಗ —	ಚ	ಛ	ಜ	ಝ	ಞ	
ಟವರ್ಗ —	ಟ	ಠ	ಡ	ಢ	ಣ	
ತವರ್ಗ —	ತ	ಥ	ದ	ಧ	ನ	
ಪವರ್ಗ —	ಪ	ಫ	ಬ	ಭ	ಮ	
ಅವರ್ಗೀಯಗಳು. —	ಯ	ರ	ಲ	ವ		
—	ಶ	ಷ	ಸ	ಹ	ಳ	ಕ್ಷ

ಕರ್ತನ ಭಯವು ಜ್ಞಾನದ ಬುಡವು.

ಯೆಲೇ ಮಕ್ಕಳೇ, ನನ್ನನ್ನು ಕೇಳಿರಿ, ಕರ್ತನ ಭಯವನ್ನು ನಿಮಗೆ ಕಲಿಸುವೆನು. ವೊಳ್ಳೇದನ್ನು ನೋಡುವದಕ್ಕೆ ದಿವಸಗಳನ್ನು ಪ್ರೀತಿ ಮಾಡಿ, ಜೀವವನ್ನು ಮೆಚ್ಚುವ ಮನುಷ್ಯನು ಯಾವನು? ಕೇಡಿನಿಂದ ನಿನ್ನ ನಾಲಿಗೆಯನ್ನೂ, ಮೋಸ ನುಡಿಯುವದರಿಂದ ನಿನ್ನ ತುಟಿಗಳನ್ನೂ ಕಾಯಿ. ಕೇಡಿನಿಂದ ತೊಲಗಿ ವೊಳ್ಳೇದನ್ನು ಮಾಡು, ಸಮಾಧಾನವನ್ನು ಹುಡುಕಿ ಅದನ್ನು ಹಿಂದಟ್ಟು. ಕರ್ತನ ಕಣ್ಣುಗಳು ನೀತಿವಂತರ ಮೇಲೆಯೂ, ಆತನ ಕಿವಿಗಳು ಅವರ ಮೊರೆಯ ಕಡೆಗೂ ಅವೆ. ಕರ್ತನ ಮುಖವು ಕೇಡನ್ನು ಮಾಡುವವರಲ್ಲಿ, ಅವರ ನೆನಪನ್ನು ಭೂಮಿಯೊಳಗಿಂದ ನಿರ್ಮೂಲ ಮಾಡುವದಕ್ಕೆ, ಇರುವದು.

ಕಲಿಸುವವನಿಗೆ ಸೂಚನೆ.

ಮಕ್ಕಳು ಕರ್ನಾಟಕ ಭಾಷೆಯ ಅಕ್ಷರಗಳನ್ನು ಅನೇಕ ದಿನ ತಿಂಗಳುಗಳ ಪರ್ಯಂತರ ಬರೆದು ಹೇಳುತ್ತಾ ಇದ್ದರೂ, ಸಹಾಯವಿಲ್ಲದೆ ಸಂಣ ಶಬ್ದಗಳನ್ನು ಸಹ ಓದಲಾರರು ಯೆಂಬದು ಸಮಸ್ತರ ಅನುಭವಕ್ಕೆ ಬಂದದೆ. ಈ ಚಿಕ್ಕ ವಹಿಯನ್ನು ಮಾಡಿದವನು ಅಕ್ಷರಗಳನ್ನು ಬೇರೆ ಕ್ರಮದಲ್ಲಿ ಇಡುವದರಿಂದಲೂ, ಒಂದೊಂದು ಪಾಠಕ್ಕೆ ತಕ್ಕ ಅಭ್ಯಾಸಗಳನ್ನು ಮಾಡುವ ಹಾಗೆ ಹೊಸತಾಗಿ ಕಲಿತ ಅಕ್ಷರಗಳನ್ನು ಬಹುವಿಧವಾಗಿ ಪ್ರಯೋಗಿಸುವದರಿಂದಲೂ, ಮೇಲೆ ಹೇಳಿದ ಪ್ರಕಾರ ಕಷ್ಟ ನಿಷ್ಫಲವಾಗದ ಹಾಗೆ-ಮಾಡ ಬಹುದು. ಆದ್ದರಿಂದ ಈ ಪುಸ್ತಕ ಬೇರೆ ಬೇರೆ ಪಾಠಗಳಾಗಿ ವಿಭಾಗಿಸಿಯದೆ. ಒಂದೊಂದರಲ್ಲಿ ಕೆಲವು ಹೊಸ ಅಕ್ಷರಗಳೂ, ಇವುಗಳನ್ನು ಮುಂಚೆ ಕಲಿತ ಅಕ್ಷರಗಳ ಸಂಗಡ ಪ್ರಯೋಗಿಸುವದಕ್ಕೆ ತಕ್ಕ ಅಭ್ಯಾಸಗಳೂ ಬರುತ್ತವೆ. ಕಲಿಸುವವನು ಬಹಳ ಜಾಗ್ರತೆಯಿಂದ ಮಕ್ಕಳಿಗೆ ಒಂದೊಂದು ಪಾಠದ ಪ್ರತಿ ಹೊಸ ಅಕ್ಷರವನ್ನು ಹ್ಯಾಗೆ ಉಚ್ಚರಿಸ ಬೇಕೆಂಬದಂನೂ, ಬೇರೆ ಅಕ್ಷರಗಳಿಗೂ ಇದಕ್ಕೂ ಇರುವ ಹೆಚ್ಚುಕಡಿಮೆಯಂನೂ, ಅವುಗಳಂನು ಬರೆಯುವದು ಹ್ಯಾಗೆಂಬದಂನೂ ತೋರಿಸಿ, ಆಯಾ ಅಭ್ಯಾಸಗಳಲ್ಲಿ ಬರುವ ಸಮಸ್ತ ಶಬ್ದಗಳ ಅರ್ಥವಂನು ತಿಳಿಸ ಬೇಕು. ಇದಾದ ಮೇಲೆ ಅದಂನು ಬೋಧಕನು ಓದಿ ಹೇಳುವಾಗ್ಯೆ, ಬರೆಯುವದಕ್ಕೆ ಶಕ್ತರಾಗುವ ಪರ್ಯಂತರ, ಮಕ್ಕಳು ಆಯಾ ಪಾಠ ಅಭ್ಯಾಸಗಳಂನು ಪ್ರತಿ ತೆಗಿಯುತ್ತಾ ಓದುತ್ತಾ ಇರ ಬೇಕು. ಇದಲ್ಲದೆ ಓದಿ ಬರೆಸುವಾಗ್ಯೆ ಮಕ್ಕಳಲ್ಲಿ ಹೆಚ್ಚಾದವರು ತಪ್ಪಿಲ್ಲದೆ ಬರೆಯುವ ಹಾಗೆ, ಮುಂಚಿನ ಪಾಠವಂನು ಅವರು ಚನ್ನಾಗಿ ಗ್ರಹಿಸುವ ಪರ್ಯಂತರ ಕೆಳಗೆ ಬರುವ ಪಾಠಕ್ಕೆ ವರ್ತಿಸಲಿಕ್ಕೆ ಬೋಧಕನು ಬಿಡ ಬಾರದು.

NOTE FOR THE TEACHER.

It is a common experience that children after having written and repeated the various syllables of the Canarese language for weeks and even months, are unable to read the most simple words without assistance. The compiler of the present little work has found that such disappointment may be obviated by a different arrangement of the syllables, and by combining with each lesson some exercises, in which the newly taught characters are employed. The book is accordingly divided into lessons, each containing some new characters, and sufficient exercises to show them in connexion with those previously taught. The teacher should be particularly careful *to show the pupils how each new character of a lesson is* **pronounced, distinguished from others,** *and* **represented by writing,** *and also give them the* **meaning of all the words** *occurring in the exercises*; *after which the pupils should* **copy and read** *the lesson until they are able to* **write it from dictation.** *The teacher should not allow a class to proceed to a new lesson before the preceding one has been mastered by most pupils so as to be able to write it correctly from dictation.*

Printed and published by G. PLEBST.

2.60

2.60

೪. ನಧದಢಥ

ಥ ಧ ದ ತ ನ ಥ
ಟ ದ ಡ ಢ ಥ ಧ
ನ ಣ ಥ ತ ಕ ಝು
ತ ಟ ನ ಧ ಘನ ದನ
ಜನ ಧನ ತಡ ತನಕ ಗಗನ

೩. ಮಝಬಛಫ

ಬ ಫ ಝ ಪ ಛ ಫ
ಮ ಪ ಬ ಚ ಟ ಝ
ಬ ಜ ಫ ಣ ಝ ಮ
ಮ ಮಗ ಮತ ಮಾತ ಪತ
ಮದ ಗಮನ ಮದಗ ಕಪಟ ಅಧಮ

೨. ಖಲರಯ

ರ ಠ ಯ ಝು ಛ ವ
ಲ ಅ ಅರ ದಯ ರಥ
ಜಯ ಫಲ ಮರ ಲಯ ಬಲ ಕಮಲ
ನರಕ ಚರಣ ಮರಣ ವಚನ

೧. ಙಕ್ಷಳಹಶ

ಸ ನ ಷ ಫ ಷ ಶ
ಳ ಹ ಪ ವ ಮ ಷ
ಹಣ ರಸ ಗಳ ವನ ಧರ
ತಗರ ಅಗಸ ಬಹಳ ಹವಳ
ಹಡಗ ಬರಹ ಸಮಯ ಅವಸರ